**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ .2370/2024**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - ಗಾನವಿ | | **ಚಾ.ಸಾ.-1** |
| **ಗಂಡನ ಹೆಸರು** | - ಮನು | | **ಪ್ರಾ.ಸಾ.-1** |
| **ವಯಸ್ಸು** | - 26 ವರ್ಷ | | |
| **ಉದ್ಯೋಗ** | - ಗೃಹಿಣಿ | | |
| **ವಾಸಸ್ಥಳ** | - ಸೋಮನಹಳ್ಳಿ | | |

ದಿನಾಂಕಃ 17-03-2026 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ಚಾ.ಸಾ. 2 ನನ್ನ ತಂದೆ, ಚಾ.ಸಾ. 3 ನನ್ನ ತಾಯಿ, ಚಾಸಾ-4 ನನ್ನ ಅಣ್ಣ, ಚಾ.ಸಾ. 5 ರಿಂದ 9 ರವರ ಪರಿಚಯವಿರುತ್ತದೆ. ಆರೋಪಿ-1 ನನ್ನ ಗಂಡ, ದಿಃ 05-03-2021 ರಂದು ನನ್ನ ಮತ್ತು ಆರೋಪಿ-1 ರವರ ಮದುವೆ ಮೈಸೂರಿನ ಗುದ್ಧ ವಿಹಾರದಲ್ಲಿ ಮದುವೆಯಾಗಿರುತ್ತದೆ. ಮದುವೆಯ ಪೂರ್ವದಲ್ಲಿ ಮದುವೆಯ ಮಾತುಕತೆಗೆ ಮದ್ದೂರಿನ ಐ ಬಿ ಯಲ್ಲಿ ನಮ್ಮ ಮನೆಯ ಕಡೆಯಿಂದ ಮದುವೆಯ ಮಾತುಕತೆಗೆ ನನ್ನ ತಂದೆತಾಯಿ, ನನ್ನ ಚಿಕ್ಕಪ್ಪ, ನನ್ನ ಗಂಡನ ಮನೆಯ ಕಡೆಯಿಂದ ಆರೋಪಿ-1, ಅವರ ತಂದೆತಾಯಿ, ಅಣ್ಣ ಅತ್ತಿಗೆ ಮದುವೆ ಮಾತುಕತೆಗೆ ಸೇರಿದ್ದರು. ಮದುವೆ ಮಾತುಕತೆ ಸಮಯದಲ್ಲಿ ವರದಕ್ಷಿಣೆಯಾಗಿ 250 ಗ್ರಾಂ ಚಿನ್ನ, ಒಂದು ಮನೆ, ಒಂದು ಸೈಟ್, ಒಂದು ಕಾರು, ಒಂದು ಬೈಕ್, 5 ಲಕ್ಷ ನಗದು ಹಣ ನೀಡಲು ಮದುವೆ ಮಾತುಕತೆ ಆಗಿರುತ್ತದೆ. ಅದರಂತೆ ಮದುವೆಯ ದಿನ 5 ಲಕ್ಷ ಹಣ ಮತ್ತು 250 ಗ್ರಾಂ ಚಿನ್ನವನ್ನು ನೀಡಿ ಮದುವೆ ಮಾಡಿಕೊಟ್ಟಿರುತ್ತಾರೆ. ಮದುವೆಯಾದ ನಂತರ ನಾನು ಗಂಡನ ಮನೆಯಲ್ಲಿ ವಾಸವಾಗಿದ್ದೇನು. ಸ್ವಲ್ಪ ದಿನಗಳ ಚೆನ್ನಾಗಿ ನೋಡಿಕೊಂಡು ನಂತರ ಮದುವೆಯ ಮಾತುಕತೆ ಸಮಯದಲ್ಲಿ ವರದಕ್ಷಿಣೆಯಾಗಿ ಮನೆ, ಕಾರು, ಸೈಟ್, ಬೈಕ್ ನೀಡಿರುವುದಿಲ್ಲವೆಂದು ನನಗೆ ಹಿಂಸೆ ನೀಡುತ್ತಿದ್ದರು. ಈ ವಿಚಾರವನ್ನು ನನ್ನ ತಂದೆಗೆ ಫೋನ್ ಮುಖಾಂತರ ತಿಳಿಸಿರುತ್ತೇನೆ. ಆಗ ನಮ್ಮ ತಂದೆ ಮದ್ದೂರಿನ ಕಾರೆಬಯಲಿನಲ್ಲಿ ನನ್ನ ಗಂಡ ಮನುರವರ ಹೆಸರಿಗೆ 6 ಲಕ್ಷದ 20 ಸಾವಿರ ಹಣವನ್ನು ನಿವೇಶನದ ಮಾಲೀಕರಿಗೆ

ಆರ್ ಟಿ ಜಿ ಎಸ್ ಸಿ ಮಾಡಿಸಿ 1 ಲಕ್ಷ ಹಣವನ್ನು ನಗದಾಗಿ ನೀಡಿ ನನ್ನ ಗಂಡನ ಹೆಸರಿಗೆ ಬರೆಸಿಕೊಟ್ಟಿರುತ್ತಾರೆ. ನಂತರ ಸ್ವಲ್ಪ ದಿನಗಳ ಆರೋಪಿ ಚೆನ್ನಾಗಿ ನೋಡಿಕೊಂಡು ನಂತರ ನನ್ನ ಗಂಡನ ಬೆಸಗರಹಳ್ಳಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಕಾರಣ ಊರಿನಿಂದ ಓಡಾಡಲು ತೊಂದರೆಯಾಗುತ್ತದೆ ಎಂದು ತಿಳಿಸಿ ನನ್ನನ್ನು ನನ್ನ ತಂದೆ ಮನೆಗೆ ಕರೆದುಕೊಂಡು ಬಂದಿರುತ್ತಾರೆ. ನನ್ನ ತಂದೆಯ ಮನೆಯಿಂದಲೇ ಆರೋಪಿ ಪ್ರತಿದಿನ ಕೆಲಸಕ್ಕೆ ಹೋಗಿ ಬರುತ್ತಿದ್ದರು. ಸರಿಯಾಗಿ ಮನೆಗೆ ಬರುತ್ತಿರಲಿಲ್ಲ ಆರೋಪಿಯನ್ನು ಪ್ರಶ್ನಿಸಿದಾಗ ನಾನು ಎಲ್ಲಿಯಾದರು ಹೋಗುತ್ತೇನೆ ನೀನು ಯಾರು ಕೇಳಲು ಎಂದು ಹೇಳುತ್ತಾರೆ. ಆರೋಪಿ ತನ್ನ ಜೊತೆ ಓದಿದ ಶ್ರೀರಂಗಪಟ್ಟಣದಲ್ಲಿ ಮಹಿಳಾ ಪೇದೆಯಾಗಿರುವ ಅರುಣಾ ಕುಮಾರಿ ಎಂಬುವವರ ಜೊತೆ ಸಂಬಂಧ ಇರುವುದಾಗಿ ತಿಳಿಸಿರುತ್ತಾರೆ. ಈ ವಿಚಾರವನ್ನು ದಿಃ 11-05-2022 ರಂದು ನಾನು ಆರೋಪಿಯನ್ನು ಪ್ರಶ್ನಿಸಿದಾಗ ರಾತ್ರಿ 11-00 ಗಂಟೆ ಸಮಯದಲ್ಲಿ ನನ್ನ ಮೇಲೆ ಕೈಯಿಂದ ಹಲ್ಲೆ ಮಾಡಿ ಅಲ್ಲಿಯೇ ಇದ್ದ ವೇಲ್ ನಿಂದ ನನ್ನ ಕುತ್ತಿಗೆ ಗೆ ಬಿಗಿದು ಕೊಲೆ ಮಾಡುವುದಾಗಿ ಬೆದರಿಸಿರುತ್ತಾರೆ. ಜೋರಾಗಿ ಕಿರುಚಿದಾಗ ನನ್ನ ತಂದೆತಾಯಿ ಜಗಳ ಬಿಡಿಸಿರುತ್ತಾರೆ. ಈ ವಿಚಾರವನ್ನು ಅವರ ಅಣ್ಣ ಮತ್ತು ಅವರ ತಂದೆಗೆ ತಿಳಿಸಿರುತ್ತೇವೆ. ನಂತರ ಆರೋಪಿಗೆ ಬುದ್ಧಿವಾದ ಹೇಳಿ ಸಮಾಧಾನಪಡಿಸಿರುತ್ತಾರೆ. ನಂತರ ಬೆಸಗರಹಳ್ಳಿ ಪೊಲೀಸ್ ಠಾಣೆಯಲ್ಲಿ ತನ್ನ ಜೊತೆ ಕರ್ತವ್ಯ ನಿರ್ವಹಿಸುತ್ತಿದ್ದ ಎಲ್ಲಮ್ಮ ಪಾಟೀಲ್ ಎಂಬುವವರ ಜೊತೆ ಸಂಬಂಧ ಇರುವುದಾಗಿ ತಿಳಿಸಿರುತ್ತಾರೆ ನಂತರ ಆರೋಪಿ-1 ರವರಿಗೆ ಬೆಸಗರಹಳ್ಳಿ ಠಾಣೆಯಿಂದ ಕೆಸ್ತೂರು ಠಾಣೆಗೆ ವರ್ಗಾವಣೆಯಾಗಿರುತ್ತದೆ. ಅಲ್ಲಿಗೆ ವರ್ಗಾವಣೆಯಾದ ನಂತರ ಮನೆಗೆ ಆರೋಪಿ-1 ರವರು ಸರಿಯಾಗಿ ಬರುತ್ತಿರಲಿಲ್ಲ. ಆ ಸಮಯದಲ್ಲಿ ಪ್ರಶ್ನಿಸಿದಾಗ ಸದರಿ ಎಲ್ಲಮ್ಮ ಪಾಟೀಲ್ ಎಂಬುವವರ ಜೊತೆ ಸಂಬಂಧ ಇರುವುದಾಗಿ ತಿಳಿಸಿ ನಂತರ ಆರೋಪಿ ಹಲ್ಲೆ ಮಾಡಲು ಪ್ರಯತ್ನಿಸಿರುತ್ತಾರೆ. ಆ ಸಮಯದಲ್ಲಿ ಆರೋಪಿ -1 ರವರು ಸದರಿ ಎಲ್ಲಮ್ಮ ಪಾಟೀಲ್ ರವರು ಜೊತೆ ಮದುವೆಯಾಗಬೇಕು. ನೀನು ವಿಚ್ಛೇದನ ನೀಡಿದರೆ ಮದುವೆಯಾಗುತ್ತೇನೆ. ಇಲ್ಲದಿದ್ದಲ್ಲಿ ನಿನ್ನನ್ನು ಸಾಯಿಸಿ ಮದುವೆಯಾಗುವುದಾಗಿ ಹೇಳುತ್ತಾರೆ. ಕೆಸ್ತೂರು ಪೊಲೀಸ್ ವಸತಿ ಗೃಹದಲ್ಲಿ ಈ ವಿಚಾರವನ್ನು ನಾನು ಪ್ರಶ್ನಿಸಿದಾಗ 07-11-2023 ರಂದು ಬೆಳಿಗ್ಗೆ 08-00 ಗಂಟೆಯಲ್ಲಿ ಆರೋಪಿ ಲಾಠಿಯಿಂದ ಹಲ್ಲೆ ಮಾಡಿ ಕೊಲೆ ಬೆದರಿಕೆ ಹಾಕಿರುತ್ತಾರೆ. ನಂತರ ನಿಮ್ಮ ತಂದೆಯ ಹೆಸರಿನಲ್ಲಿರುವ ಆಸ್ತಿಯನ್ನು ನನ್ನ ಹೆಸರಿಗೆ ಬರೆಯಬೇಕು ಹಾಗೂ ಮದ್ದೂರಿನಲ್ಲಿ ಕಟ್ಟಿಸುತ್ತಿರುವ ಮನೆಯನ್ನು ನನ್ನ ಹೆಸರಿಗೆ ಬರೆಸಿಕೊಡದಿದ್ದರೂ ಕೊಲೆ ಮಾಡುವುದಾಗಿ ಕೊಲೆ ಬೆದರಿಕೆ ಹಾಕಿರುತ್ತಾರೆ. ನಂತರ

ನನ್ನನ್ನು ಹಾಗೂ ನನ್ನ ಮಗಳನ್ನು ಗ್ಯಾಸ್ ಹಚ್ಚಿ ಕೊಲೆ ಮಾಡುವುದಾಗಿ ಬೆದರಿಸಿರುತ್ತಾರೆ ಆಗ ನಾನು ಮತ್ತು ನನ್ನ ಮಗು ಕಿರುಚಿಕೊಂಡಾಗ ಅಲ್ಲಿಯೇ ಹತ್ತಿರದಲ್ಲಿದ್ದ ಪೊಲೀಸ್ ಠಾಣೆಗೆ ಕೇಳಿಸುತ್ತದೆ ಎಂದು ಆರೋಪಿ ಹೊರಟು ಹೋಗಿರುತ್ತಾರೆ. ಈ ವಿಚಾರವನ್ನು ಆರೋಪಿ-1 ರವರ ತಂದೆ ತಾಯಿ ಮತ್ತು ಅಣ್ಣನಿಗೆ ತಿಳಿಸಿರುತ್ತೇನೆ. ಹಾಗೂ ನನ್ನ ತಂದೆತಾಯಿ ಮತ್ತು ನನ್ನ ಚಿಕ್ಕಪ್ಪನಿಗೆ ವಿಚಾರ ತಿಳಿಸಿರುತ್ತೇನೆ. ಮಧ್ಯಾಹ್ನ 12-00 ಗಂಟೆ ಸುಮಾರಿಗೆ ಆರೋಪಿಯ ತಂದೆ ಲಿಂಗಯ್ಯ ತಾಯಿ ಲಿಂಗಮ್ಮ, ಅವರ ಅಣ್ಣ ಮಲ್ಲೇಶ್, ಅತ್ತಿಗೆ ವರಲಕ್ಷ್ಮೀರವರು ಸುಮಾರು 12-00 ಗಂಟೆ ಸಮಯದಲ್ಲಿ ವಸತಿಗೃಹದ ಬಳಿ ಬಂದಿರುತ್ತಾರೆ. ಅವರುಗಳು ಏಕಾಏಕಿ ನನ್ನ ವಿರುದ್ಧ ಜಗಳ ತೆಗೆದು ನನ್ನ ಮಗನ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಿದ್ದೀಯಾ ಎಂದು ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆ. ಆಗ ನನ್ನ ಮಗುವನ್ನು ಕರೆದುಕೊಂದು ಬರುತ್ತಿದ್ದಾಗ ಆರೋಪಿ-1 ರವರ ಅಣ್ಣ ನನ್ನ ಕಪಾಲಕ್ಕೆ ಹೊಡೆದು ನನ್ನ ನೈಟಿಯನ್ನು ಹಿಡಿದು ಎಳೆದಾಡಿ ಅಲ್ಲಿಯೇ ಇದ್ದ ಹಿಟ್ಟಿನ ದೊಣ್ಣೆಯಿಂದ ನನ್ನ ಮೇಲೆ ಹೊಡೆದಿರುತ್ತಾರೆ. ಆ ಸಮಯದಲ್ಲಿ ನನ್ನ ತಂದೆತಾಯಿ, ಅಣ್ಣ ಹಾಗೂ ಚಿಕ್ಕಪ್ಪ, ವಸತಿಗೃಹದ ಬಳಿ ಬಂದು ಜಗಳ ಬಿಡಿಸಿ ಸಮಾಧಾನಪಡಿಸಿರುತ್ತಾರೆ. ಆಗ ನನ್ನ ಚಿಕ್ಕಪ್ಪ ಆರೋಪಿಯ ತಂದೆತಾಯಿ, ಅಣ್ಣಅತ್ತಿಗೆ ಬಳಿ ಏಕೆ ಈ ರೀತಿ ನನ್ನ ಮಗಳಿಗೆ ಏಕೆ ಹೊಡೆಯುತ್ತಿದ್ದೀರಾ ಎಂದು ನಿಮ್ಮ ಮಗನಿಗೆ ಬುದ್ಧಿ ಹೇಳಿರುತ್ತಾರೆ. ಆಗ ಆರೋಪಿಯ ತಾಯಿ ನಿಮ್ಮ ಅಣ್ಣನ ಹೆಸರಿನಲ್ಲಿರುವ ಮನೆ, ಕಾರು, ಸೈಟ್ ನ್ನು ನನ್ನ ಮಗನ ಹೆಸರಿಗೆ ಬರೆಯಿರಿ ಇಲ್ಲದಿದ್ದರೂ ನಿಮ್ಮ ಮಗಳನ್ನು ಸುಮ್ಮನೆ ಬಿಡುವುದಿಲ್ಲವೆಂದು ಬೆದರಿಕೆ ಹಾಕಿರುತ್ತಾರೆ. ಈ ವಿಚಾರವನ್ನು ನನ್ನ ಚಿಕ್ಕಪ್ಪ ನನ್ನ ತಂದೆಗೆ ತಿಳಿಸಿರುತ್ತಾರೆ. ಆ ಸಮಯದಲ್ಲಿ ನನ್ನ ತಂದೆ ನನ್ನನ್ನು ನಮ್ಮ ಮನೆಗೆ ಕರೆದುಕೊಂಡು ಬರಲು ತಿಳಿಸಿರುತ್ತಾರೆ. ಆಗ ನನ್ನ ತಂದೆಯ ಮನೆಯಾದ ಮದ್ದೂರಿನ ಸೋಮನಹಳ್ಳಿ ಗ್ರಾಮಕ್ಕೆ ಕರೆದುಕೊಂಡು ಬಂದಿರುತ್ತಾರೆ. ಅಲ್ಲಿಗೆ ಬಂದ ನಂತರ 3-4 ಭಾರಿ ನ್ಯಾಯಾ ಪಂಚಾಯಿತಿ ಮಾಡಿರುತ್ತಾರೆ. ಅಲ್ಲಿಯೂ ಸಹ ಆರೋಪಿ ಹಾಗೂ ಅವರ ತಂದೆತಾಯಿ ಮತ್ತು ಅಣ್ಣ ಆಸ್ತಿಯನ್ನು ಬರೆಸಿಕೊಟ್ಟರೇ ಮಾತ್ರ ಕರೆದುಕೊಂಡು ಹೋಗುವುದಾಗಿ ಹೇಳಿರುತ್ತಾರೆ. ಈ ಹಿಂದೆಯೇ ನನ್ನ ತಂದೆ ನೀಡಿದ್ದ ಸೈಟ್ ನ್ನು ಮಾರಾಟ ಮಾಡಿರುವ ವಿಚಾರ ತಿಳಿಸಿರುತ್ತಾರೆ. ಈ ಆಸ್ತಿಗಳನ್ನು ನೀಡಿದರೂ ಸಹ ಅದನ್ನು ಮಾರಾಟ ಮಾಡಿರುತ್ತೀರೀ ಎಂದು ನನ್ನ ತಂದೆ ಒಪ್ಪಿರುವುದಿಲ್ಲ. ನಾವು ಕೇಳಿದಷ್ಟು ನೀಡದಿದ್ದರೂ ನಿಮ್ಮ ಮಗಳನ್ನು ಕರೆದುಕೊಂಡು ಹೋಗುವುದಿಲ್ಲವೆಂದು ತಿಳಿಸಿರುತ್ತಾರೆ. ದಿಃ 21-03-2024 ರಂದು ದೂರು ನೀಡಲು ಹೋಗಿದ್ದು ರಾತ್ರಿಯಾದ್ದರಿಂದ ಮಾರನೇ ದಿನ ಪೊಲೀಸರಿಗೆ ದೂರನ್ನು ನೀಡಿರುತ್ತೇನೆ.

ದೂರನ್ನು ನೀಡಿದ ದಿನವೇ ಪೊಲೀಸರು ಸಂಜೆ 06-15 ರ ಸಮಯದಲ್ಲಿ ಸೋಮನಹಳ್ಳಿಯ ನಮ್ಮ ಮನೆಯ ಬಳಿ ಚಾಸಾ-6 ಮತ್ತು 7 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ನನಗೆ ಒಂದು ನೋಟಿಸ್ ನೀಡಿರುತ್ತಾರೆ. ಮದುವೆಗೆ ಸಂಬಂಧಿಸಿದ ದಾಖಲಾತಿಗಳನ್ನು ನೀಡುವಂತೆ ಸದರಿ ನೋಟಿಸ್ ನಲ್ಲಿ ತಿಳಿಸಿರುತ್ತಾರೆ. ದಿಃ 28-03-2024 ಮತ್ತು 08-04-2024 ರಂದು ಪೊಲೀಸರು ನನಗೆ ಈ ಪ್ರಕರಣದಲ್ಲಿ ಎರಡು ನೋಟಿಸ್ ಗಳನ್ನು ನೀಡಿರುತ್ತಾರೆ. ದಿಃ 12-04-2024 ರಂದು ಪೊಲೀಸರು ಕೇಳಿದ ನಿವೇಶನದ ಕ್ರಯಪತ್ರ, ಮದುವೆ ಸಮಯದ ಫೋಟೋಗಳು, ಮದುವೆಯ ಪ್ರಮಾಣಪತ್ರವನ್ನು ನಾನು ಪೊಲೀಸರ ಮುಂದೆ ಹಾಜರುಪಡಿಸಿರುತ್ತೇನೆ. ಅದನ್ನು ಪೊಲೀಸರು ಚಾಸಾ-10 ಮತ್ತು 11 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ಸದರಿ ಮಹಜರ್ ನ್ನು ಬೆಳಿಗ್ಗೆ 11-30 ರಿಂದ 12-15 ರವರೆಗೆ ಜರುಗಿಸಿರುತ್ತಾರೆ. ಅದೇ ದಿನ ಕೆಸ್ತೂರಿನ ಪೊಲೀಸ್ ವಸತಿಗೃಹದ ಬಳಿ ಮಹಜರ್ ಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಸ್ಥಳದಲ್ಲಿ ಮಧ್ಯಾಹ್ನ 01-30 ರಿಂದ 02-15 ರವರೆಗೆ ಚಾಸಾ-8 ಮತ್ತು 9 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿರುತ್ತಾರೆ. ನನ್ನ ದಿಃ09-09-2024 ರಂದು ಈ ಬಗ್ಗೆ ಪೊಲೀಸರು ನನ್ನ ಮುಂದುವರೆದ ಹೇಳಿಕೆಯನ್ನು ಪಡೆದಿರುತ್ತಾರೆ.

**ಮುಂದುವರೆದ ಮುಖ್ಯವಿಚಾರಣೆಗಾಗಿ ಸಮಯಾವಕಾಶ ಕೇಳಿದ್ದು ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.